**ಸಾಕ್ಷಿಯನ್ನು ದಿನಾಂಕಃ 17-12-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

1. ನಾನು ಕುಸುಮನ ಗಂಡನ ಸಹೋದರಿಯ ಮಗ ಇರುವೆನು. ಕುಸುಮ ಪಾಲು ವಿಭಾಗಕ್ಕಾಗಿ ಹಾಕಿರುವ ದಾವೆಯ ಕುರಿತು ನನಗೆ ಮಾಹಿತಿ ಇರುವುದು. ಕುಸುಮಾ ರವರು ತನ್ನ ಗಂಡನ ಅಸ್ತಿಯಲ್ಲಿ ಪಾಲು ಬರಬೇಕೆಂದು ದಾವೆಯನ್ನು ಸಲ್ಲಿಸಿರುವರು ಅಂದರೆ ಸರಿ. ನನ್ನ ತಾಯಿ ಹಾಕು ಚಿಕ್ಕಮ್ಮ ಈ ದಾವೆಯಲ್ಲಿ ಏನು ತಕರಾರು ಹಾಕಿರುವರು ಎಂದು ನಾನು ತಿಳಿದುಕೊಂಡಿದ್ದೇನೆ. ತಕರಾರಿನಲ್ಲಿ ತಾವು ಕೂಡ ನ್ಯಾಯಾಲಯದ ಶುಲ್ಕ ಪಾವತಿಸಿ ಪಾಲನ್ನು ಪಡೆಯಲು ಸಿದ್ದರಿದ್ದೇವೆ ಎಂದು ಹೇಳಿರುವರು ಅಂದರೆ ಸರಿ.

2. ತನ್ನ ಪಾಲಿನ ಅಸ್ತಿಗೆ ಸಂಬಂದಸಿದಂತೆ ಯಾವುದೇ ದಾಖಲೆಗಳನ್ನು ಮಾಡಲು ಕುಸುಮಾಳಿಗೆ ಸ್ವತಂತ್ರ್ಯ ಇತ್ತು ಅಂದರೆ ಸರಿ. ಕುಸುಮಾ ಯಾವುದೇ ನ್ಯೂನತೆಗಳಿಂದ ಬಳಲುತ್ತಿರಲಿಲ್ಲ ಅಂದರೆ ಸರಿಯಲ್ಲ. ಕುಸುಮಾ ರವರು ಮೃತ ಪಡುವ 5-6 ತಿಂಗಳ ಪೂರ್ವದಲ್ಲಿ ನಾನು ಆಕೆಯನ್ನು ನೋಡಿದ್ದೆನು. ಆಗ ಅವರು ಚೆನ್ನಾಗಿದ್ದರು ಅಂದರೆ ಸರಿಯಲ್ಲ ಕಣ್ಣು ಮಂಜಾಗಿತ್ತು. ಅವರು ಆಗ ಚೆನ್ನಾಗಿ ಮಾತನಾಡುತ್ತಿದ್ದರು ಅಂದರೆ ಸರಿ. ಅವರಿಗೆ ಜ್ಞಾನ ಇತ್ತು ಅಂದರೆ ಸರಿ.

3. ಈ ದಾವೆಯಲ್ಲಿ ಇರುವ ಅಸ್ತಿಗಳ ವಿವರಗಳು ನನಗೆ ಗೊತ್ತಿವೆ. ವಾದಿಯ ಹಕ್ಕನ್ನು ನಷ್ಟಗೊಳಿಸಲು ಈ ದಾವೆ ಚಾಲ್ತಿಯಲ್ಲಿರುವಾಗ ನಾನು, ನನ್ನ

ತಾಯಿ ಹಾಗೂ ಚಿಕ್ಕಮ್ಮ ಸೇರಿಕೊಂಡು ಸಿದ್ದೇಶ ಇವರ ಹೆಸರಿಗೆ ದಾವಾ ಅಸ್ತಿಯನ್ನು ಮಾರಾಟ ಮಾಡಿದ್ದೇವೆ ಅಂದರೆ ಸರಿ. ಸಾಕ್ಷಿ ಸ್ವಲ್ಪ ಹೊತ್ತಿನ ನಂತರ ಇಲ್ಲ ಎಂದು ನುಡಿದರು. ಖರೀದಿ ಪತ್ರವನ್ನು ನಾವು ವಾದಿಗೆ ಅಸ್ತಿ ಸಿಗಬಾರದು ಎಂದು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

4. ಕುಸುಮಾರವರು ದಾವಣಗೆರೆಯಲ್ಲಿ ತರಳುಬಾಳು ಬಡಾವಣೆಯಲ್ಲಿ ಇದ್ದರು ಆಕೆಯ ಮನೆ ನಂಬರು ನನಗೆ ಗೊತ್ತಿಲ್ಲ. ನಾನು ಕುಸುಮಾ ರವರ ಮನೆಗೆ ವಾರದಲ್ಲಿ ಒಂದು ಸಲ ಹೋಗುತ್ತಿದ್ದೆನು. ಆಕೆಗೆ ಸಂಬಂದಿಸಿದ ವೈದ್ಯಕೀಯ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಕುಸುಮಾರವನ್ನು ಬೇಟಿ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕುಸುಮಾಳ ತಂಗಿಯೇ ಆಕೆಯನ್ನು ಜೋಪಾನ ಮಾಡುತ್ತಿದ್ದರು ಅಂದರೆ ಸರಿಯಲ್ಲ. ನಮ್ಮ ಮಾವ ತೀರಿಕೊಂಡ ನಂತರ ನಾವು ಕುಸುಮಾರವರ ದೇಕರೇಕೆಯನ್ನು ಯಾವತ್ತೂ ಮಾಡಿರುವುದಿಲ್ಲ ಅಂದರೆ ಸರಿಯಲ್ಲ.

5. ತನ್ನ ತಂಗಿ ತನ್ನನ್ನು ಚೆನ್ನಾಗಿ ನೋಡಿಕೊಂಡ ಕಾರಣ ಕುಸುಮಾರವರು ತಂಗಿಯ ಗಂಡನ ಹೆಸರಿಗೆ ಮರಣ ಶಾಸನವನ್ನು ತನ್ನ ಸ್ವ-ಇಚ್ಛೆಯಿಂದ ಬರೆದಿಟ್ಟಿರುವರು ಅಂದರೆ ಸುಳ್ಳು. ಮರಣ ಶಾಸನದ ದಿನಾಂಕ ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ಕುಸುಮಾರವರು ಮೃತ ಪಟ್ಟ ನಂತರ ವಾದಿಗೆ ಮರಣಶಾಸನದ ಬಗ್ಗೆ ತಿಳಿದು ಬಂದಿರುತ್ತದೆ ಅಂದರೆ ಸರಿ. ನನಗೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರಗಳು ಗೊತ್ತಿವೆ. ಸಾಕ್ಷಿ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ಯಾವುದೇ ದಾಖಲೆಯ ಅಧಾರದ ಮೇಲೆ ಬರೆಸಿರುವುದಿಲ್ಲ. ನನ್ನ ತಾಯಿ ಹಾಗೂ ಚಿಕ್ಕಮ್ಮ

ಹೇಳಿಕೊಟ್ಟಂತೆ ವಾದಿಯ ಹಕ್ಕನ್ನು ನಷ್ಟಗೊಳಿಸಲು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕುಸುಮಾರ ಆರೋಗ್ಯವಾಗಿದ್ದರು ಅಂದರೆ ಸರಿಯಲ್ಲ. ಆಕೆಗೆ ಕಣ್ಣು ಮಂಜಾಗಿ ಜರ್ಜರಿತಳಾಗಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮರುಣ ಶಾಸವನ್ನು ಬರೆದುಕೊಟ್ಟ ನಂತರವೂ ಆಕೆ ಆರೋಗ್ಯವಾಗಿದ್ದರು ಅಂದರೆ ಸರಿಯಲ್ಲ. ನಮಗೆ ದಾವಾ ಅಸ್ತಿಯ ಮೇಲೆ ದಾಖಲೆಗಳನ್ನು ಮಾಡಲು ಪೂರ್ಣ ಪ್ರಮಾಣದ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ.

6. ಕುಸುಮಾಳ ತಂಗಿಯ ಗಂಡ ದಾಖಲೆಗಳನ್ನು ಸೃಷ್ಟಿ ಮಾಡಿರುವರು ಎಂದು ಸುಳ್ಳಾಗಿ ಬರೆಸಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**17-12-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 17.12.2025